

# ಗಿನ್ನೆಸ್ ಹೂಕೋಸು!



ಹೂಕೋಸು ಅಥವಾ ಕ್ವಾಲಿಫ್ಲವರ್ ಎಲ್ಲರಿಗೂ ಇಷ್ಟವಾಗುವ ಪೋಷಕಾಂಶವಿರುವ ತರಕಾರಿ. ಗೋಬಿ ಮಂಚೂರಿಯಂತಹ ತಿನಸುಗಳನ್ನೂ ಇದರಿಂದ ತಯಾರಿಸಬಹುದು. ನಾವು ಪೇಟೆಯಿಂದ ಕೊಂಡು ತರುವ ಒಂದು ಹೂಕೋಸು ಎಷ್ಟು ಭಾರವಿರಬಹುದು? ಸುಮಾರು ಒಂದರಿಂದ ಒಂದೂವರೆ ಕಿಲೋ ತಾನೆ? ಆದರೆ ಇಲ್ಲೊಂದು ಹೂ ಕೋಸು ನೋಡಿ. ಇದು 27. 5 ಕಿಲೋ ಭಾರವಿದ್ದು ಜಗತ್ತಿನಲ್ಲಿ ಇಷ್ಟು ದೈತ್ಯ ಗಾತ್ರದ ಹೂಕೋಸನ್ನು ಯಾರೂ ಬೆಳೆದಿಲ್ಲ ಎಂದು ಅದರ ಹೆಸರು ವಿಶ್ವದಾಖಲೆಗೆ ಸೇರಿಕೊಂಡಿದೆ.

ಇಂತಹ ಬೃಹತ್‌ಗಾತ್ರದ ಹೂಕೋಸನ್ನು ಬೆಳೆದಿರುವ ರೈತ ಪೀಟಗ್ಲೇಜ್ ಬ್ರೂಕ್. ಈಸ್ಟ್ ಮಿಡ್‌ಲ್ಯಾಂಡಿನ ನೆವಾಕರ್ ಅವನ ಊರು. ವಯಸ್ಸು ಎಪ್ಪತ್ತು ವರ್ಷ. ದಾಖಲೆಗಾಗಿಯೇ ಭಾರೀ ದೊಡ್ಡ ತರಕಾರಿಗಳನ್ನು ಬೆಳೆಯುವುದು ಅವನ ಒಂದು ಹವ್ಯಾಸ. ಈ ಮೊದಲು ಈರುಳ್ಳಿ, ಬೀಟ್ರೂಟ್, ಆಲೂಗೆಡ್ಡೆ ಮುಂತಾಗಿ ಕಣ್ಸೆಳೆಯುವಷ್ಟು ದೊಡ್ಡ ತರಕಾರಿಗಳನ್ನು ಬೆಳೆದು ವಿಶ್ವ ದಾಖಲೆಗಳನ್ನು ಬರೆದಿರುವ ಅವನು ಈಗ ಐದನೆಯ ಸಲ ಗಿನ್ನೆಸ್ ದಾಖಲೆಯಲ್ಲಿ ತನ್ನ ಸಾಧನೆಯನ್ನು ಸೇರಿಸಿಕೊಳ್ಳಲು ಸಫಲನಾಗಿದ್ದಾನೆ.

ಬ್ರೂಕ್ ಈ ಕೋಸನ್ನು ಬೆಳೆದಿರುವುದು ಹಸಿರುಮನೆಯ ಒಳಗೆ. ಅವನ ಪತ್ನಿ ಮೇರಿ ಕೌಲಿ ಇದರ ಕೃಷಿಗೆ ನೆರವಾಗಿದ್ದಾಳೆ. ಇದರ ಒಂದೊಂದು ಎಲೆ ಕೂಡ ಒಬ್ಬ ಸಾಮಾನ್ಯ ಮನುಷ್ಯನಿಗಿಂತಲೂ ನೀಳವಾಗಿದ್ದು ಅದರ ಉದ್ದ ಆರು ಅಡಿಗಳಷ್ಟಿದೆ. ಸಾಧಾರಣ ಕೋಸಿಗಿಂತ ಇಪ್ಪತ್ತು ಪಟ್ಟು ಅಧಿಕ ತೂಕ ಹೊಂದಿರುವ ಇಂತಹ ಒಂದು ಕೋಸು ಇದ್ದರೆ ಸಾಕು ಚಿಕ್ಕ ಕುಟುಂಬಕ್ಕೆ ಕೆಲವು ವಾರಗಳ ತನಕ ನಿತ್ಯ ಭಕ್ಷಣೆಗೆ ಸಾಕೋ ಸಾಕಾಗುತ್ತದೆ.

'ಇಷ್ಟು ದೊಡ್ಡ ಗಾತ್ರದ ಕೋಸು ಬೆಳೆಯಲು ಏನೇನು ಪೋಷಕಾಂಶಗಳನ್ನು ಬಳಸಿದ್ದೀರಿ?' ಎಂದು ಕೇಳಿದರೆ ಬ್ರೂಕ್, 'ಒಂದಿಷ್ಟು ಕ್ಯಾಲ್ಸಿಯಂ ನೈಟ್ರೇಟ್ ಮತ್ತು ಪೊಟ್ಯಾಷ್ ಬಿಟ್ಟರೆ ಬೇರೆ ಏನೂ ಗೊಬ್ಬರ ಉಪಯೋಗಿಸಿಲ್ಲ. ಬೆಳೆಯಬೇಕು ಎಂಬ ಛಲಕ್ಕೆ ನಿಸರ್ಗ ಕೊಟ್ಟ ಕೊಡುಗೆಯಿದು. ಮನಸ್ಸು ಮಾಡಿದರೆ ಇದಕ್ಕಿಂತ ದೊಡ್ಡದು ನೀವೂ ಬೆಳೆಯಬಲ್ಲಿರಿ' ಎಂದಿದ್ದಾನೆ.

**ಪ. ರಾಮಕೃಷ್ಣ ಶಾಸ್ತ್ರಿ**